ತರಗತಿ: 10 ವಿಷಯ: ವಿಜ್ಞಾನ ಬಂಧ: 30 ದಿನಗಳ ಕಲಿಕಾ ಚಟುವಟಿಕೆಗಳು

| ಅಪೇಕ್ಷಿತ ಕಲಿಕಾ ಫಲಗಳು | ಕಲಿಕಾಂಶಗಳು | ಸಲಹಾತ್ಮಕ ಚಟುವಟಿಕೆಗಳು | ಚಟುವಟಿಕೆಗಳ ನಿರ್ವಹಣೆಗಾಗಿ ಸೂಚನೆಗಳು |
|---|---|---|---|
| 1.ಚಲನೆಗೆ ಸಂಬಂಧಿಸಿದಂತೆ ಪ್ರಮುಖ ಪರಿಕಲ್ಪನೆಗಳನ್ನು ವ್ಯಾಖ್ಯಾನಿಸುವರು & ನಿತ್ಯ ಜೀವನದ ಸನ್ನಿವೇಶಗಳಲ್ಲಿ ಲೆಕ್ಕಿಸುವರು. | 1.ಚಲಿಸಿದ ದೂರ & ಸ್ಥಾನಪಲ್ಲಟಗಳನ್ನು ವ್ಯಾಖ್ಯಾನಿಸಿ, ವ್ಯತ್ಯಾಸಿಸುವರು. | ದಿನ1.<br>1.1: ಗೋಲಿ/ಚೆಂಡು,ಪೈಪ್ & ಸ್ಟಾಪ್ ವಾಚ್ ಬಳಸಿ ಚಟುವಟಿಕೆ<br>1.2: ದಿಕ್ಕಿಗನುಗುಣವಾಗಿ ವಸ್ತುವನ್ನು ಚಲಿಸು<br>1.3:ರೇಖಾಚಿತ್ರ ನೋಡು, ಚಲಿಸಿದ ದೂರ & ಸ್ಥಾನಪಲ್ಲಟ ಪತ್ತೆಹಚ್ಚು. | 1.1-ಬೇರೆ ಬೇರೆ ಉದ್ದದ ಪೈಪುಗಳಲ್ಲಿ ಗೋಲಿಯನ್ನು ಉರುಳಿಸುತ್ತಾ,ಗೋಲಿಯು ಚಲಿಸಿದ ದೂರ & ತೆಗೆದುಕೊಂಡ ಕಾಲವನ್ನು ಗಮನಿಸಲಿ.ಚಲಿಸಿದ ದೂರ, ಸ್ಥಾನಪಲ್ಲಟ, ತೆಗೆದುಕೊಂಡ ಕಾಲ ಮುಂತಾದವುಗಳನ್ನು ಶಿಕ್ಷಕರ ಸಲಹೆಯಂತೆ ಮೌಖಿಕವಾಗಿ ಲೆಕ್ಕಹಾಕಲಿ. ನಂತರ ಯಾವ ಸಂದರ್ಭದಲ್ಲಿ ಸ್ಥಾನಪಲ್ಲಟ ಉಂಟಾಗಿದೆ ಎಂಬುದನ್ನು ಚರ್ಚಿಸೋಣ. |
| | 2.ಜವ & ವೇಗಗಳ ಅರ್ಥ ನಿರೂಪಿಸುವರು | ದಿನ 2<br>2.1:ಕೀಲಿ ಕಾರು/ರಿಮೋಟ್ ಕಾರು ಬಳಸಿ ಆಟದ ಮೂಲಕ ಚಟುವಟಿಕೆ.<br>2.2:ಜವ & ವೇಗ ಪರಿಕಲ್ಪನೆಗೆ ಸಂಬಂಧಿಸಿದ ವಿಡಿಯೋಗಳ ಪ್ರದರ್ಶನ<br>2.3:ಚರ್ಚೆ. | 2.1-ಶಾಲಾ ಮೈದಾನದಲ್ಲಿ/ ತರಗತಿ ಕೊಠಡಿಯಲ್ಲಿ ರಿಮೋಟ್ ಕಾರನ್ನು ವಿವಿಧ ದೂರಗಳಿಗೆ,ವಿವಿಧ ದಿಕ್ಕುಗಳಿಗೆ ಚಲಿಸುತ್ತಾ ವಿವಿಧ ಸಂದರ್ಭಗಳಲ್ಲಿ ಜವ & ವೇಗಗಳನ್ನು ಗುರುತಿಸಿ ಲೆಕ್ಕಿಸಲು ತೊಡಗಿಸೋಣ.<br>2.2-ಜವ & ವೇಗಗಳಿಗೆ ಸಂಬಂಧಿಸಿದ ಕೆಲವು ಸರಳ ವಿಡಿಯೋಗಳನ್ನು ಮಕ್ಕಳಿಗೆ ತೋರಿಸೋಣ. ನಂತರ ಅಲ್ಲಿ ಉಂಟಾಗಿರುವುದೋ ಜವವೋ ? ವೇಗವೋ ಎಂಬುದನ್ನು ಅವರೊಡನೆ ಚರ್ಚಿಸುತ್ತಾ ಅರ್ಥೈಸೋಣ. |

| | | | |
|---|---|---|---|
| | 3.ವಸ್ತುಗಳು ಚಲಿಸುವಾಗ ಉಂಟಾಗುವ ವೇಗೋತ್ಕರ್ಷ ವನ್ನು ಗುರುತಿಸು ವರು. | 3.1:ವಿಡಿಯೋ & ಪಿಪಿಟಿ ವೀಕ್ಷಿಸು<br>3.2:ಬಲ ಪ್ರಯೋಗಿಸು, ವೇಗೋತ್ಕರ್ಷಿಸು<br>3.3:ಯಾರು ಬೇಗ ಚಲಿಸುವರು/ತಲುಪುವರು? ಪತ್ತೆಹಚ್ಚು. | 3.1-ಮೊದಲು ವೇಗೋತ್ಕರ್ಷಕ್ಕೆ ಸಂಬಂದಿಸಿದ ವಿಡಿಯೋಗಳನ್ನು ವೀಕ್ಷಿಸಲು ತೊಡಗಿಸಿ,ನಂತರ ವಸ್ತುವಿನ ಚಲನೆಯ ವೇಗದಲ್ಲಿನ ಏರಿಳಿತವನ್ನು ಗಮನಿಸಿ, ಅದು ವೇಗೋತ್ಕರ್ಷ ಎಂದು ನಿರೂಪಿಸಲು ಮಾರ್ಗದರ್ಶಿಸೋಣ.<br>https://www.youtube.com/watch?v=e5Gl2LLLAGo&feature=youtu.be<br><br>3.3- ವೇಗೋತ್ಕರ್ಷಕ್ಕೆ ಸಂಬಂಧಿಸಿದ ಕೆಲವು ಸಾಂಧರ್ಬಿಕ ಕಥೆಗಳನ್ನು/ ಸಂದರ್ಭಗಳನ್ನು/ ಉದಾಹರಣೆಗಳನ್ನು ವಿದ್ಯಾರ್ಥಿಗಳಿಗೆ ಹೇಳಲಿ. ನಂತರ ಆ ಸಂದರ್ಭಗಳಲ್ಲಿ ಕಾಲಕ್ಕೆ ತಕ್ಕಂತೆ ವೇಗ ಹೆಚ್ಚು / ಕಡಿಮೆಯಾದರೆ ಏನಾಗುತ್ತದೆ? ಎಂಬುದನ್ನು ತಾರ್ಕಿಕವಾಗಿ ಚಿಂತಿಸಲು ಸೂಚಿಸೋಣ. |
| 2.ಶಕ್ತಿ ನಿತ್ಯತೆಯ ನಿಯಮ ನಿರೂಪಿಸು ವರು ಹಾಗೂ ವಿದ್ಯುತ್ ಶಕ್ತಿಯ ಸುಲಭ ಪರಿವರ್ತನೆ ಯನ್ನು ಮನಗಾಣು ವರು. | 1.ಚಲನ ಶಕ್ತಿ & ಪ್ರಚನ್ನ ಶಕ್ತಿಗಳನ್ನು ವ್ಯತ್ಯಾಸಿಸುವ ವರು. | ದಿನ3.<br>1.1:ಶಕ್ತಿಯ ಪರಿವರ್ತನೆಗೆ ಸಂಬಂಧಿಸಿದ ಪ್ರಯೋಗಗಳು<br>1.2: ವಿಡಿಯೋಗಳ ವೀಕ್ಷಣೆ<br>1.3: ಚಿತ್ರ ನೋಡು ಶಕ್ತಿ ಪರಿವರ್ತನೆಯನ್ನು ವಿಶ್ಲೇಷಿಸು. | 1.1- ಕೆಲವು ಸರಳ ಪ್ರಯೋಗಗಳ ಪ್ರಾತ್ಯಕ್ಷಿಕೆ(ಚಲನ ಶಕ್ತಿಯಿಂದ ಪ್ರಚ್ಛನ್ನ ಶಕ್ತಿಗೆ, ಪ್ರಚ್ಛನ್ನ ಶಕ್ತಿಯಿಂದ ಚಲನ ಶಕ್ತಿಗೆ) ನೋಡಲಿ,ನಂತರ ಪ್ರತಿಯೊಂದು ಪ್ರಯೋಗದಲ್ಲೂ ಶಕ್ತಿಯ ಪರಿವರ್ತನೆಯನ್ನು ಗುರುತಿಸುತ್ತಾ ,ಶಿಕ್ಷಕರ ಮಾರ್ಗದರ್ಶನದಲ್ಲಿ ತಾವೇ ಪ್ರಯೋಗ ಮಾಡಿ ನೋಡಿ,ಶಕ್ತಿಯ ಪರಿವರ್ತನೆಯನ್ನು ಕಂಡುಕೊಳ್ಳಲು ಅನುಕೂಲಿಸೋಣ.<br>ಉದಾ: ಸ್ಪ್ರಿಂಗ್ ಬುಗುರಿ, ಗಡಿಯಾರ. ಎತ್ತರದಿಂದ ನೀರು ಸುರಿಯುವುದು |
| | 2.ಉಷ್ಣ ಶಕ್ತಿ & ತಾಪ ಗಳನ್ನು ಗುರುತಿಸಿ, ವ್ಯತ್ಯಾಸಿಸು ವರು. | ದಿನ4.<br>2.1: ಶಾಖ ನೀಡು, ಬಿಸಿ ಮಾಡು ಆಟ<br><br>2.2: ಬಿಸಿ ಮಾಡು, ತಂಪು ಮಾಡು ಆಟ<br><br>2.3:ವಸ್ತುಗಳನ್ನು ಕುದಿಸು & ಕರಗಿಸು.<br>ಕೋಷ್ಟಕದಲ್ಲಿ ತಾಪ ದಾಖಲಿಸು. | 2.1-ವಿದ್ಯಾರ್ಥಿಗಳು ಕಾಗದ,ನೀರು,ಬೆರಣಿ,ಬೆಂಕಿ ಕಡ್ಡಿ ಮುಂತಾದ ವಸ್ತುಗಳನ್ನು ಭೂತಕನ್ನಡಿ ಬಳಸಿ ಬಿಸಿಮಾಡುವ ಆಟ ಆಡಲಿ. ನಂತರ ವಸ್ತುವಿನ ತಾಪದಲ್ಲಿ ಉಂಟಾದ ಹೆಚ್ಚಳವನ್ನು ಗಮನಿಸಲಿ. ವಸ್ತುವಿನ ಪ್ರಾರಂಭಿಕ & ಅಂತಿಮ ತಾಪವನ್ನು ತರ್ಕಿಸಲಿ. ಹೀಗೆ ಮಾಡುತ್ತಾ ಉಷ್ಣ & ತಾಪಗಳ ವ್ಯತ್ಯಾಸಗಳನ್ನು ಪಟ್ಟಿಮಾಡಲು ಸುಳುಹುಗಳನ್ನು ನೀಡೋಣ. |

| | | | |
|---|---|---|---|
| | 3.ವಿದ್ಯುಚ್ಛಕ್ತಿಯ ಸುಲಭ ಪರಿವರ್ತನೆಯನ್ನು ಸಹಜ ಸಂದರ್ಭಗಳಲ್ಲಿ ಗಮನಿಸಿ, ಅದರ ಪ್ರಾಮುಖ್ಯತೆ ಅರಿಯುವರು | ದಿನ 5.<br>3.1:ವಿದ್ಯುತ್ ಮಂಡಲ ರಚನಾ ಚಟುವಟಿಕೆ.<br>3.2:ಪ್ರಯೋಗ & ಪ್ರಾತ್ಯಕ್ಷಿಕೆ<br>3.3:ವಿದ್ಯುತ್ ಶಕ್ತಿಯ ಪ್ರಾಮುಖ್ಯತೆ ಕುರಿತು ಸರಳ ನಾಟಕ<br>3.4:ನಾನು ವಿದ್ಯುತ್ ಉಪಕರಣ, ನನ್ನ ಕೆಲಸ ನಾನೇ ಹೇಳುವೆ- ಮೌಖಿಕ ಚಟುವಟಿಕೆ | 3.1-ವಿದ್ಯಾರ್ಥಿಗಳು ಗುಂಪುಗಳಲ್ಲಿ ಶುಷ್ಕಕೋಷ,ವಾಹಕ ತಂತಿಗಳು,ಬಲ್ಬ್,ನೈಕ್ರೋಮ್ ತಂತಿ ಬಳಸಿ ಶಿಕ್ಷಕರ ಸೂಚನೆಯಂತೆ ವಿದ್ಯುತ್ ಮಂಡಲ ರಚನೆ ಮಾಡಲಿ,ಅಲ್ಲಿ ಉಂಟಾಗುತ್ತಿರುವ ವಿದ್ಯುತ್ ಶಕ್ತಿಯ ವಿವಿಧ ಪರಿವರ್ತನಾ ವಿಧಾನಗಳನ್ನು ತಾವೇ ಪ್ರಯೋಗಿಸಿ ನೋಡಲಿ.ನಂತರ ಶಕ್ತಿಯ ಪರಿವರ್ತನೆಯನ್ನು ವಿಶ್ಲೇಷಿಸಲಿ. |
| 3.ಬೆಳಕಿನ ಗುಣಲಕ್ಷಣಗಳನ್ನು ಅರ್ಥೈಸುವರು & ವಿಶ್ಲೇಷಿಸುವರು. | 1.ಬೆಳಕಿನ ವಿಶಿಷ್ಟ ಗುಣಗಳು ಹಾಗೂ ಪ್ರತಿಫಲನವನ್ನು ಪರೀಕ್ಷಿಸುವರು. | ದಿನ6.<br>1.1:ಪ್ರತಿಫಲನದ ಸರಳ ಪ್ರಯೋಗಗಳು<br>ಬೆಳಕು ಬಾಗಿಸುವ ಆಟ<br>1.2:ದರ್ಪಣ ಬಳಸು, ಪ್ರತಿಬಿಂಬದ ಲಕ್ಷಣ ಹೇಳು.<br>1.3:ಕನ್ನಡಿ ಬಳಸು, ಕೊಟ್ಟಿರುವ ಚಿತ್ರದ / ಪದದ ಪ್ರತಿಬಿಂಬದ ರೂಪ ಚಿತ್ರಿಸು. | 1.1-ಬ್ಯಾಟರಿ, ನೇರ & ವಕ್ರ ಕೊಳವೆಗಳು ಹಾಗೂ ವಿವಿದ ದರ್ಪಣಗಳನ್ನು ಬಳಸಿ ವಿದ್ಯಾರ್ಥಿಗಳು ಬೆಳಕನ್ನು ಬಾಗಿಸುವ ಚಟುವಟಿಕೆ ಮಾಡುವಂತೆ ಸೂಚಿಸಿ.ಬೆಳಕನ್ನು ಬೇರೆ ಬೇರೆ ಮಾಧ್ಯಮಗಳಲ್ಲಿ ಪ್ರಸಾರ ಮಾಡಿ ನೋಡಲಿ. ಬೆಳಕಿನ ಚಲನೆಯಲ್ಲಿ ಉಂಟಾಗುವ ವೈಶಿಷ್ಟ್ಯತೆ ಗಮನಿಸಿ, ತಮ್ಮ ಅಭಿಪ್ರಾಯಗಳನ್ನು ಚರ್ಚಿಸಲು ಅನುಕೂಲಿಸೋಣ. |
| | 2.ಬೆಳಕಿನ ವಕ್ರೀಭವನ & ವರ್ಣವಿಭಜನೆಗಳನ್ನು ಗಮನಿಸಿ ಪ್ರಶಂಶಿಸುವರು. | ದಿನ7.<br>2.1:ವಕ್ರೀಭವನದ ಸರಳ ಪ್ರಯೋಗಗಳು.<br>2.2:ವಿಡಿಯೋ ಕ್ಲಿಪ್ ಗಳ ಪ್ರದರ್ಶನ<br>2.3:ನೀರು ತುಂಬಿದ ಬಕೆಟ್ ನಲ್ಲಿ ನಾಣ್ಯವನ್ನು | 2.1- ವಿದ್ಯಾರ್ಥಿಗಳು ವಿವಿದ ದ್ರವಗಳ ಮೂಲಕ ಬೆಳಕಿನ ಕಿರಣಗಳನ್ನು ಹಾಯಿಸಿ ನೋಡಲಿ,ನಂತರ ಮಸೂರಗಳ ಮೂಲಕ ಬೆಳಕನ್ನು ಹಾಯಿಸಿ ಪ್ರತಿ ಬಿಂಬಗಳನ್ನು ವೀಕ್ಷಿಸಲಿ. ನಂತರ ಅದರ ಗುಣಲಕ್ಷಣಗಳನ್ನು ತರಗತಿಯಲ್ಲಿ ಪ್ರಸ್ತುತ ಪಡಿಸಲು ಸಹಕರಿಸೋಣ. ಸೂರ್ಯನ ಬೆಳಕನ್ನು ಪಟ್ಟಕದಲ್ಲಿ ಹಾಯಿಸಿ ವರ್ಣ ವಿಭಜನೆಯನ್ನು ಗಮನಿಸಲು ನೆರವಾಗೋಣ. |

| | | | |
|---|---|---|---|
| | | ಇಟ್ಟು ಮತ್ತೊಂದು ನಾಣ್ಯದಿಂದ ಅದಕ್ಕೆ ಹೊಡೆಯುವ ಆಟ. | |
| 4.ಶಬ್ದದ ಉತ್ಪತ್ತಿ & ಶಬ್ದ ತರಂಗಗಳ ಪ್ರಸರಣೆಯನ್ನು ಅರಿತು, ಶಬ್ದಮಾಲಿನ್ಯವನ್ನು ನಿಯಂತ್ರಿಸುವ ಅಗತ್ಯತೆಯನ್ನು ವಿವರಿಸುವರು | 1.ಶಬ್ದ ಉಂಟಾಗುವಿಕೆಯ ವಿಧಾನವನ್ನು ವಿವರಿಸುವರು. | ದಿನ 8.<br>1.1:ಶಬ್ದ ಉಂಟಾಗುವಿಕೆ ಬಗ್ಗೆ ಪ್ರಾಯೋಗಿಕ ಚಟುವಟಿಕೆ<br>1.2: ಘನ & ದ್ರವ ವಸ್ತುಗಳಲ್ಲಿ ಶಬ್ದದ ಅಲೆಗಳು ಉಂಟಾಗುವುದರ ಬಗ್ಗೆ ಪ್ರಾತ್ಯಕ್ಷಿಕೆ. | 1.1-ಶೃತಿ ಕವೆ, ಸ್ಪ್ರಿಂಗ್, ತಟ್ಟೆ, ನೀರು ಮುಂತಾದವುಗಳನ್ನು ಬಳಸಿ ನೀರಿನಲ್ಲಿ ಅಲೆಗಳನ್ನು ಉಂಟುಮಾಡುವ ಚಟುವಟಿಕೆ ಮಾಡಿ ನೋಡಲಿ. ಇದೇ ರೀತಿಯ ಅನೇಕ ಪ್ರಯೋಗಗಳ ಮೂಲಕ ಶಬ್ದದ ಉತ್ಪತ್ತಿ ವಿಧಾನವನ್ನು ವಿಶ್ಲೇಷಿಸಲು ಸೂಚಿಸಿ.ನಂತರ ಅವರ ಉತ್ತರಗಳನ್ನು ಸಂಶ್ಲೇಷಿಸೋಣ . |
| | 2.ಶಬ್ದದ ಅಲೆಗಳ ಪ್ರಸಾರವನ್ನು ರೇಖಾಚಿತ್ರದ ರೂಪದಲ್ಲಿ ಬರೆಯುವರು | ದಿನ9.<br>2.1:ಶಬ್ದ ಕೇಳು, ಆವೃತ್ತಿ ಗುರುತಿಸು.<br>2.2:ವಿಡಿಯೋ ಪ್ರದರ್ಶನ<br>2.3:ಶಬ್ದದ ಅಲೆಯ ರೇಖಾಚಿತ್ರದ ಅಭ್ಯಾಸ | 2.1-ಬೇರೆ ಬೇರೆ ಆವೃತ್ತಿಯ ಶಬ್ದಗಳನ್ನು ತರಗತಿ ಕೊಠಡಿಯಲ್ಲಿ ಧ್ವನಿವರ್ಧಕ ಬಳಸಿ ಕೇಳಿಸಿ. ಪ್ರತಿ ಶಬ್ದಪ್ರಸಾರದಲ್ಲಿಉಂಟಾದ ಏರಿಳಿತವನ್ನು ಗಮನಿಸಲು ಸೂಚಿಸಿ,ಶಬ್ದದ ಅಲೆಗಳ ಪ್ರಸಾರದಲ್ಲಿ ಉಂಟಾದ ವೈಪರೀತ್ಯವನ್ನು ಚಿತ್ರರೂಪದಲ್ಲಿ ವ್ಯಕ್ತಪಡಿಸಲು ಸಹಕರಿಸೋಣ. |
| | 3.ಶಬ್ದಮಾಲಿನ್ಯದ ಅರ್ಥ ಮತ್ತು ಅದರ ಪರಿಣಾಮಗಳನ್ನು ಚರ್ಚಿಸುವರು | ದಿನ10.<br>3.1: ವಿಡಿಯೋ ವೀಕ್ಷಣೆ<br>3.2: ಶಬ್ದ ಮಾಲಿನ್ಯದ ಕುರಿತು ಚರ್ಚೆ<br>3.3:ಶಬ್ದಮಾಲಿನ್ಯ ಉಂಟಾಗುವ ಸಂದರ್ಭಗಳ ಕುರಿತು ಕಿರುನಾಟಕ | 3.1-ವಿದ್ಯಾರ್ಥಿಗಳು ಶಬ್ದಮಾಲಿನ್ಯಕ್ಕೆ ಸಂಬಂಧಿಸಿದ ಕಾರ್ಟೂನ್ ವಿಡಿಯೋಗಳನ್ನು ವೀಕ್ಷಿಸಲಿ, ಶಬ್ದಮಾಲಿನ್ಯದ ಪರಿಣಾಮಗಳ ಕುರಿತು ಗುಂಪುಗಳಲ್ಲಿ ಚರ್ಚಿಸಿ,ಶಬ್ದಮಾಲಿನ್ಯದ ಕುರಿತು ಟಿಪ್ಪಣಿ ಬರೆಯಲು ಸೂಚಿಸಿ, ನಂತರ ಪ್ರತಿಯೊಂದು ಗುಂಪು ಪ್ರಸ್ತುತಪಡಿಸಲು ಮಾರ್ಗದರ್ಶಿಸೋಣ. |

| | | | |
|---|---|---|---|
| 5.ಪರಮಾಣುವಿನ ರಚನೆಯನ್ನು ಮತ್ತು ಗುಣಲಕ್ಷಣಗಳನ್ನು ವಿವರಿಸುವರು | 1.ಪರಮಾಣುವಿನ ಮೂಲಭೂತ ಕಣಗಳನ್ನು ಗುರುತಿಸುವರು. | ದಿನ 11.<br>1.1:ಚಿತ್ರಬರೆಯುವ ಚಟುವಟಿಕೆ.<br>1.2:ವಿವಿದ ಧಾತುಗಳ ಪರಮಾಣುಗಳ ಇಲೆಕ್ಟ್ರಾನ್ ವಿತರಣಾ ಚಿತ್ರ ಬರೆಯುವುದು.<br>1.3:ಮಾದರಿ ತಯಾರಿಕೆ | 1.1-ಪರಮಾಣುವಿನ ಪ್ರಾತಿನಿಧಿಕ ಚಿತ್ರ ಬರೆದು ಭಾಗಗಳನ್ನು ಗುರುತಿಸಲು ಸೂಚಿಸಿ.ಅದರಲ್ಲಿ ಮೂಲಭೂತ ಕಣಗಳನ್ನು ಗುರುತಿಸಲು ಸಹಕರಿಸೋಣ. |
| | 2.ಧಾತುವಿನ ವೇಲೆನ್ಸಿಯನ್ನು ಪರಾಮರ್ಶಿಸುವರು. | ದಿನ 12.<br>2.1:ವಿವಿಧ ಧಾತುಗಳನ್ನು ನೀಡಿ ಧಾತುಗಳ ಹೆಸರು, ಪರಮಾಣು ಸಂಖ್ಯೆ, ರಾಶಿ ಸಂಖ್ಯೆ, ಹಾಗೂ ಧಾತುವಿನ ವೇಲೆನ್ಸಿ ಬರೆಯುವ ಚಟುವಟಿಕೆ ನೀಡುವುದು.<br>2.2:ವಿಶೇಷ ಧಾತುಗಳ ವೇಲೆನ್ಸಿಯ ಚಿತ್ರಪಟ | 2.1- ಹೆಚ್ಚು ಮತ್ತು ಕಡಿಮೆ ವೇಲೆನ್ಸಿ ಹೊಂದಿರುವ ಧಾತುಗಳ ಪಟ್ಟಿ ಮಾಡಲು ತಿಳಿಸುವುದು. ನಂತರ ರಟ್ಟುಗಳಲ್ಲಿ ಅದರ ಚಿತ್ರ ರಚಿಸಲು ಅನುಕೂಲಿಸೋಣ.<br>2.2- ಜಡ ಅನಿಲಗಳ ವೇಲೆನ್ಸಿ ಸೂಚಿಸುವ ಚಿತ್ರಪಟ ವೀಕ್ಷಿಸಲು ಸೂಚಿಸಿ, ವೇಲೆನ್ಸಿ ಸೊನ್ನೆಯಾಗಿರಲು ಕಾರಣವೇನೆಂಬುದನ್ನು ಊಹಿಸಲು ಪ್ರೇರೇಪಿಸೋಣ. |
| | 3.ಇಲೆಕ್ಟ್ರಾನ್ ವಿನ್ಯಾಸ ರಚಿಸುವರು. | ದಿನ13.<br>3.1:ನಾನು ಇಲೆಕ್ಟ್ರಾನ್: ನನ್ನ ಕವಚ ಆಟ<br>3.2:ಆವರ್ತ ಕೋಷ್ಟಕದ ಧಾತುಗಳ ಪರಮಾಣುವಿನ ಎಲೆಕ್ಟ್ರಾನ್ ಚುಕ್ಕೆ ವಿನ್ಯಾಸ ರಚನೆಯ ಚಟುವಟಿಕೆ.<br>3.3:ಪರಮಾಣು ಮಾದರಿ ತಯಾರಿಕೆ | 3.1- ಶಾಲಾ ಮೈದಾನದಲ್ಲಿ ಪರಮಾಣುವಿನ ಮಾದರಿ ರಚಿಸೋಣ.ನ್ಯೂಕ್ಲಿಯಸ್ ನ ಭಾಗದಲ್ಲಿ ಶಿಕ್ಷಕರು ನಿಲ್ಲಲಿ. ನಂತರ ಶಿಕ್ಷಕರು ಹೇಳಿದ ಕವಚದಲ್ಲಿ ವಿದ್ಯಾರ್ಥಿಗಳು ನಿಲ್ಲುವಂತೆ ಸೂಚಿಸುತ್ತಾ ಆಟವಾಡಿಸುತ್ತಾ ಇಲೆಕ್ಟ್ರಾನ್ ವಿನ್ಯಾಸ ಕಲಿಸೋಣ.<br>3.2-ಧಾತುಗಳ ಪರಮಾಣು ಸಂಖ್ಯೆ ಬರೆದು ಕಪ್ಪು ಹಲಗೆಯ ಮೇಲೆಯೇ ವಿನ್ಯಾಸ ರಚಿಸಲು ಸಹಕರಿಸೋಣ.<br>3.3-ರಟ್ಟು , ಪೆನ್ಸಿಲ್ , ಸೂಜಿ, ದಾರ & ಮಣಿಗಳನ್ನು ಬಳಸಿ ಪರಮಾಣುವಿನ ಮಾದರಿ ತಯಾರಿಸಲು ಸಹಕರಿಸೋಣ. |

| | | | |
|---|---|---|---|
| 6.ರಾಸಾಯನಿಕ ಕ್ರಿಯೆಗಳ ವಿಧಗಳು & ಬದಲಾವಣೆಗಳನ್ನು ವರ್ಗೀಕರಿಸುವರು. | 1.ರಾಸಾಯನಿಕ ಕ್ರಿಯೆಗಳ ಪ್ರಯೋಗ ಮಾಡುವರು. | ದಿನ 14.<br>1.1:ಸಲ್ಫರ್ ಡೈಆಕ್ಸೈಡ್ ತಯಾರಿಕೆಯ ಚಟುವಟಿಕೆ.<br><br>1.2:ವಿವಿಧ ರಾಸಾಯನಿಕ ಕ್ರಿಯೆಗಳ ಪ್ರಯೋಗಗಳ ಚಟುವಟಿಕೆ ಕೈಗೊಳ್ಳುವುದು. | 1.1- ಸಲ್ಫರ್ ಪುಡಿಯು ಗಾಳಿಯೊಂದಿಗೆ ವರ್ತಿಸುವ ಪ್ರಯೋಗ ಮಾಡಿಸಿ,ನಂತರ ಅಲ್ಲಿ ಹೊಸ ವಸ್ತು ಉತ್ಪತ್ತಿಯಾಗಿದೆಯೋ? ಇಲ್ಲವೋ ಎಂಬುದನ್ನು ಗಮನಿಸಲು ಸೂಚಿಸೋಣ.<br><br>1.2-ಬೇರೆ ಬೇರೆ ರಾಸಾಯನಿಕ ವಸ್ತುಗಳನ್ನು ನೀಡಿ ಪ್ರಯೋಗ ನಡೆಸಿ ರಾಸಾಯನಿಕ ಕ್ರಿಯೆಯ ಹೊಸ ಉತ್ಪನ್ನಗಳನ್ನು ಗುರುತಿಸಲು ಹೇಳೋಣ. |
| | 2.ರಾಸಾಯನಿಕ ಬದಲಾವಣೆಯನ್ನು ಅರ್ಥೈಸುವರು | ದಿನ 15<br>2.1:ದೈನಂದಿನ ಜೀವನದಲ್ಲಿನ ಭೌತ , ರಾಸಾಯನಿಕ ಬದಲಾವಣೆಗಳ ಪಟ್ಟಿ ತಯಾರಿಕೆ<br>2.2:ಭೌತ ಬದಲಾವಣೆಯ ಪ್ರಯೋಗಗಳು | 2.1- ವಿದ್ಯಾರ್ಥಿಗಳಿಗೆ ಅವರ ದೈನಂದಿನ ಜೀವನದಲ್ಲಿ ನಡೆಯುವ ಭೌತ & ರಾಸಾಯನಿಕ ಬದಲಾವಣೆಗಳನ್ನು ಗುರುತಿಸಿ , ಪಟ್ಟಿ ಮಾಡಿ ಬರೆಯಲು ಅನುಕೂಲಿಸೋಣ.<br>ಉದಾ: ಹಗ್ಗ ತುಂಡಾಗುವುದು, ಹಾಲು ಮೊಸರಾಗುವುದು<br>2.2- ಮಂಜುಗಡ್ಡೆ ಕಾಯಿಸಿ ಕುದಿಸುವ ಚಟುವಟಿಕೆ ತೋರಿಸಿ ಭೌತ ಬದಲಾವಣೆ ತೋರಿಸೋಣ.<br>https://www.youtube.com/watch?v=LZH8DzQTsQY |
| | 3.ರಾಸಾಯನಿಕ ಕ್ರಿಯೆಗಳ ವಿಧಗಳನ್ನು ಗುರುತಿಸುವರು & ಸಮೀಕರಣಗಳನ್ನು ಬರೆಯುವರು. | ದಿನ 16<br>3.1: ಸಮೀಕರಣ ಓದು, ಪ್ರತಿವರ್ತಕ & ಉತ್ಪನ್ನಗಳನ್ನು ಗುರುತಿಸು.<br>3.2:ಪ್ರಯೋಗ ನೋಡಿ ಸಮೀಕರಣ ರಚಿಸು<br>3.3:ಪ್ರಯೋಗ ಮಾಡಿ, ರಾಸಾಯನಿಕ ಕ್ರಿಯೆಯ ವಿಧ ಗುರುತಿಸು.<br>3.4:ದೈನಂದಿನ ಜೀವನದ ಸಂದರ್ಭಗಳಲ್ಲಿ ಮೇಲಿನ ರಾಸಾಯನಿಕ ಕ್ರಿಯೆಗಳ | 3.1-ವಿದ್ಯಾರ್ಥಿಗಳಿಗೆ ರಾಸಾಯನಿಕ ಸಮೀಕರಣಗಳಿರುವ ಮಿಂಚುಪಟ್ಟಿಗಳನ್ನು ನೀಡಿ ಪ್ರತಿವರ್ತಕ ಮತ್ತು ಉತ್ಪನ್ನಗಳನ್ನು ಗುರುತಿಸಲು ಸೂಚಿಸಿ. ಅದರ ವಿಧವನ್ನು ಗುರುತಿಸಿ ಹೇಳಲು ಸಲಹೆ ನೀಡೋಣ.<br>3.2-ರಾಸಾಯನಿಕ ಸಂಯೋಜನೆ, ವಿಭಜನೆ,ಸ್ಥಾನಪಲ್ಲಟ ಕ್ರಿಯೆಗಳ ಸಮೀಕರಣಗಳನ್ನುಕಪ್ಪು ಹಲಗೆಯ ಮೇಲೆ ಬರೆಯಲು ಸಹಕರಿಸೋಣ.<br>https://www.youtube.com/watch?v=2Juem0lcifE&feature=youtu.be<br><br>ಯಾವುದೇ ಪ್ರಯೋಗ ಮಾಡಿದಾಗಲೂ ಪ್ರಯೋಗದ |

| | | | |
|---|---|---|---|
| | | ಜ್ಞಾನದ ಅನ್ವಯ.<br>ಉದಾ :ಅರಿಶಿನ &<br>ಸುಣ್ಣದ ಮಿಶ್ರಣ | ಸಮೀಕರಣವನ್ನುಕಪ್ಪು ಹಲಗೆಯ ಮೇಲೆ ಬರೆಯಲು ಸೂಚಿಸಿ.ಅದನ್ನು ಪರಿಶೀಲಿಸೋಣ. |
| 7.ರಾಸಾಯನಿಕ ಬಂಧ-ಅಯಾನಿಕ & ಸಹವೇಲೆನ್ಸಿ ಬಂಧಗಳ, ಸಂಯುಕ್ತಗಳ ಗುಣ ಪಟ್ಟಿಮಾಡುವರು. | 1.ಅಯಾನಿಕ ಬಂಧ & ಸಹವೇಲೆನ್ಸಿ ಬಂಧಗಳ ಬಗ್ಗೆಚರ್ಚಿಸುವರು.<br><br>2.ಅಯಾನೀಕರಣ ಪ್ರಯೋಗ ವನ್ನು ಕೈಗೊಳ್ಳುವರು. | ದಿನ 17<br>1.1:ಕೆಲವು ರಾಸಾಯನಿಕ ವಸ್ತುಗಳನ್ನುಮೇಜಿನ ಮೇಲಿಟ್ಟು ವರ್ಗೀಕರಿಸುವ ಚಟುವಟಿಕೆ.<br>1.2:ಅಯಾನಿಕ & ಸಹವೇಲೆನ್ಸಿಯ ವಸ್ತುಗಳ ಕರಗುವ ಮತ್ತು ಕುದಿಯುವ ಬಿಂದುವನ್ನು ಪರೀಕ್ಷಿಸುವ ಚಟುವಟಿಕೆ.<br><br>2.1:ಅಡುಗೆ ಉಪ್ಪು ಅಯಾನೀಕರಣಗೊಳ್ಳುವ ಚಟುವಟಿಕೆ | 1.1-ರಾಸಾಯನಿಕ ವಸ್ತುಗಳನ್ನು ನೀಡಿ , ಅಯಾನಿಕ ಬಂಧ & ಸಹವೇಲೆನ್ಸಿ ಬಂಧದಿಂದ ಉಂಟಾದ ವಸ್ತುಗಳನ್ನು ವರ್ಗಿಕರಿಸಲು ಸಹಾಯ ಮಾಡೋಣ.<br><br>1.2-ಕಬ್ಬಿಣದ ಮೂಸೆಯಲ್ಲಿ ಅಯಾನಿಕ & ಸಹವೇಲೆನ್ಸಿಯ ಸಂಯುಕ್ತಗಳನ್ನುಗಾಳಿಯೊಂದಿಗೆ ಹುರಿಯುವ ಚಟುವಟಿಕೆ ಮಾಡಿ ನೋಡಲಿ.ಕರಗುವ ಮತ್ತು ಕುದಿಯುವ ಬಿಂದುಗಳನ್ನು ಪರೀಕ್ಷಿಸಿ ನೋಡಿ, ಕೋಷ್ಟಕ ತಯಾರಿಸಲು ಮಾರ್ಗದರ್ಶಿಸೋಣ.<br><br>2.1-ಬೀಕರಿನಲ್ಲಿರುವ ನೀರಿಗೆ ಉಪ್ಪನ್ನು ಹಾಕಿ ಅಯಾನೀಕರಣಗೊಳ್ಳುವ ಬಗ್ಗೆ ಹಾಗೂ ಕಾರ್ಬನಿಕ ಸಂಯುಕ್ತಗಳು ಅಯಾನಿಕರಣ ಗೊಳ್ಳಲು ಸಾದ್ಯವಿಲ್ಲವೆಂದು ಮುನ್ಸೂಚಿಸೋಣ& ಅರ್ಥೈಸೋಣ. |
| 8.ಲೋಹಗಳು, ಅಲೋಹಗಳು, ಭೌತ & ರಾಸಾಯನಿಕ ಗುಣಗಳ ಉಪಯೋಗಗಳನ್ನು | 1.ಲೋಹ ಮತ್ತು ಅಲೋಹಗಳನ್ನು ಗುರತಿಸುವರು. | ದಿನ 18<br>1.1:ಲೋಹ ಮತ್ತು ಅಲೋಹಗಳ ಬೇರ್ಪಡಿಸುವ ಚಟುವಟಿಕೆ. | 1.1-ಮೇಜಿನ ಮೇಲೆ ಕೆಲವು ವಸ್ತುಗಳನ್ನು ಇಟ್ಟು ವಿದ್ಯಾರ್ಥಿಗಳು ಅವುಗಳನ್ನು ಲೋಹ ಅಲೋಹಗಳೆಂದು ಗುರುತಿಸಿ ವಿಂಗಡಿಸಲು ಸೂಚಿಸಿ.ನಂತರ ಅವುಗಳ ಗುಣಗಳನ್ನು ಪಟ್ಟಿಮಾಡಲು ಸಹಕರಿಸೋಣ. |

| | | | |
|---|---|---|---|
| ವಿವರಿಸು ವರು | 2. ಲೋಹ & ಅಲೋಹಗಳ ಭೌತ ಮತ್ತು ರಾಸಾಯನಿಕ ಗುಣಗಳನ್ನು ಪರೀಕ್ಷಿಸಿ ನೋಡುವರು | ದಿನ 19<br>2.1:ಕುಟ್ಯತೆ& ತನ್ಯತೆ ಚಟುವಟಿಕೆ.<br>2.2:ಕ್ರಿಯಾಪಟುತ್ವ ಚಟುವಟಿಕೆ ಪ್ರಯೋಗ ನಡೆಸುವುದು. | 2.1-ರಂಜಕ, ಗಂಧಕ ಮತ್ತು ಕಬ್ಬಿಣ ,ತಾಮ್ರ ಮುಂತಾದವುಗಳನ್ನು ಬಡಿದು & ಎಳೆದು ನೋಡುವ ಚಟುವಟಿಕೆ ಮಾಡಿಸೋಣ. ಕುಟ್ಯತೆಗೆ & ತನ್ಯತೆಗೆ ಒಳಪಡುವ ವಸ್ತು ಯಾವುದೆಂದು ಗುರುತಿಸಲು ಅನುಕೂಲಿಸೋಣ.<br>2.2-ಸೋಡಿಯಂ ಮತ್ತು ಗಂಧಕ ಎರಡನ್ನು ನೀರಿಗೆ ಹಾಕಿ ಪ್ರಯೋಗ ನಡೆಸಿದಾಗ ತತ್ ಕ್ಷಣ ರಾಸಾಯನಿಕ ಕ್ರಿಯೆ ನಡೆಸುವ ಸೋಡಿಯಂ ಕ್ರಿಯಾಪಟುತ್ವವನ್ನು ಗಮನಿಸಲು ಹೇಳೋಣ. |
| | 3.ಲೋಹ ಮತ್ತು ಅಲೋಹಗಳ ಉಪಯೋಗಗಳನ್ನು ಪಟ್ಟಿ ಮಾಡುವರು. | ದಿನ 20<br>3.1:ದೈನಂದಿನ ಜೀವನದಲ್ಲಿ ಬಳಸುವ ಅನೇಕ ಲೋಹ ಮತ್ತು ಅಲೋಹಗಳ ಪಟ್ಟಿ ಮಾಡುವ ಚಟುವಟಿಕೆ<br>3.2:ವಿಡಿಯೋ ನೋಡಿ ಲೋಹದ ಉಪಯೋಗ ಗುರುತಿಸು.<br>3.3:ವಸ್ತುವನ್ನು ನೋಡಿ ಅದು ಲೋಹೀಯವೇ?ಅಲೋಹೀಯವೇ ಗುರುತಿಸು. | 3.1-ವಿವಿಧ ಕಾರ್ಖಾನೆಗಳಲ್ಲಿ ಉಪಯೋಗಿಸುವ ಲೋಹ ಮತ್ತು ಅಲೋಹಗಳ ವಿಡಿಯೋ ಮತ್ತು ಪಿಪಿಟಿಗಳನ್ನು ವೀಕ್ಷಿಸಲು ಅವಕಾಶ ಕಲ್ಪಿಸೋಣ.ನಂತರ ನೋಡಿದ ಅಂಶಗಳನ್ನು ಕೋಷ್ಟಕದ ರೂಪದಲ್ಲಿ ದಾಖಲಿಸಲು ಸಹಕರಿಸೋಣ.<br><br>3.2-ದೈನಂದಿನ ಜೀವನದಲ್ಲಿ ಬಳಸುವ ಕೆಲವು ವಸ್ತುಗಳನ್ನು ತರಗತಿಯಲ್ಲಿ ಜೋಡಿಸೋಣ. ಪ್ರತಿ ವಿದ್ಯಾರ್ಥಿಯೂ ಒಂದೊಂದು ವಸ್ತುವನ್ನು ಸ್ಪರ್ಶಿಸಲು & ಅವನಿಗಿಷ್ಟ ಬಂದಂತೆ ವೀಕ್ಷಿಸಲು ಅವಕಾಶಿಸೋಣ. ನಂತರ ಅದು ಲೋಹೀಯವೇ / ಅಲೋಹೀಯವೇ ಎಂಬುದನ್ನು ಕಾರಣ ಸಹಿತ ಹೇಳಲು ಸೂಚಿಸೋಣ. |
| 9.ಕೃಷಿಯಲ್ಲಿನ ವೈಜ್ಞಾನಿಕ ಪದ್ಧತಿಗಳನ್ನು ತಿಳಿಯುವರು. | 1.ಕೃಷಿಯಲ್ಲಿ ಬಳಸುವ ವೈಜ್ಞಾನಿಕ ಪದ್ಧತಿಗಳನ್ನು ಅರಿಯುವರು | ದಿನ 21<br>1.1:ಬನ್ನಿ ಹೊಲಕ್ಕೆ ಹೋಗೋಣ<br>1.2:ಕ್ಷೇತ್ರ ಭೇಟಿ-ವಿವಿಧ ಕೃಷಿಪದ್ಧತಿಗಳನ್ನು ತಿಳಿಯಲು<br>1.3:ವಿಡಿಯೋ ವೀಕ್ಷಣೆ - ಸಾವಯವ ಕೃಷಿ ಉತ್ತಮ ಹೇಗೆ? | 1.1-ವಿದ್ಯಾರ್ಥಿಗಳು ಶಿಕ್ಷಕರೊಂದಿಗೆ ಶಾಲೆಯ ಹತ್ತಿರದ ಸ್ಥಳೀಯ ಕೃಷಿ ಭೂಮಿಯನ್ನು ವೀಕ್ಷಿಸಲಿ,ಅಲ್ಲಿ ಅಳವಡಿಸಿಕೊಂಡಿರುವ ವೈಜ್ಞಾನಿಕ ಕೃಷಿ ವಿಧಾನಗಳ ಬಗ್ಗೆ ರೈತರ ಜೊತೆ ಚರ್ಚಿಸಿ ಪಟ್ಟಿಮಾಡಲು ಸಹಕರಿಸೋಣ.<br>https://www.youtube.com/watch?v=NQ2B0JZHjTw |

| | | | |
|---|---|---|---|
| | | 1.4:ವೈಜ್ಞಾನಿಕ ಪದ್ಧತಿಗಳ ಚಿತ್ರಪಟ ವೀಕ್ಷಿಸಿ ವಿವರಿಸು<br>1.5:ವೈಜ್ಞಾನಿಕ ಪದ್ಧತಿಗಳನ್ನು ಅಳವಡಿಸಿಕೊಂಡಿರುವ ರೈತರ ಸಂದರ್ಶನ | |
| | 2.ಕೃಷಿ ಉಪಕರಣ ಗಳು & ಗೊಬ್ಬರಗಳ ಅನುಕೂಲ ಮತ್ತು ಅನಾನುಕೂಲ ತೆಗಳನ್ನು ವಿಶ್ಲೇಷಿಸು ವರು. | ದಿನ 22<br>2.1:ಸಂಪ್ರಾದಾಯಿಕ ಕೃಷಿ ಉಪಕರಣಗಳನ್ನು ವೀಕ್ಷಿಸಿ ಮಾದರಿ ತಯಾರಿಕೆ.<br>2.2:"ಹಾಕು ಸಾವಯವ ಗೊಬ್ಬರ , ನೋಡು ಬೆಳೆಯ ಅಬ್ಬರ"<br>2.3:ಕೃಷಿ ಉತ್ಪನ್ನಗಳಿಂದ ಆಟಿಕೆ ತಯಾರಿಕೆ.<br>2.4;ಕೃಷಿ ಉಪಕರಣಗಳ ಚಿತ್ರಪಟ ವೀಕ್ಷಣೆ<br>2.5:ಕೃಷಿ ಉಪಕರಣಗಳ ಮಾದರಿಯ ವಸ್ತುಪ್ರದರ್ಶನ | 2.1-ಹೊಲದಲ್ಲಿ ಬಳಸುವ ಕೃಷಿ ಉಪಕರಣಗಳ ನ್ನು ಮತ್ತು ಅವುಗಳನ್ನು ಉಪಯೋಗಿಸುವ ವಿಧಾನವನ್ನು ರೈತರಿಂದ ಪ್ರಾಯೋಗಿಕವಾಗಿ ನೋಡಲು ಅವಕಾಶಿಸೋಣ. ನಂತರ ಕೃಷಿ ಚಟುವಟಿಕೆಗಳನ್ನು ವೀಕ್ಷಿಸಿ ಅಲ್ಲಿ ಕಂಡ ಕೃಷಿ ಉಪಕರಣಗಳ ಮಾದರಿಗಳನ್ನು ತಯಾರಿಸಲು ಪ್ರೇರೇಪಿಸೋಣ.<br>https://www.youtube.com/watch?v=khXPo_QY0B8<br>2.2-ಸಾವಯವ ಕೃಷಿ ಆಧಾರಿತ ಹೊಲ ಭೇಟಿ ಮಾಡಿ ಮಾಹಿತಿ ಸಂಗ್ರಹಿಸಲು, ಸಾವಯವ ಗೊಬ್ಬರದ ಮಹತ್ವವನ್ನು ಗುಂಪುಗಳಲ್ಲಿ ಚರ್ಚಿಸಲು ಅನುವು ಮಾಡೋಣ. |
| | 3.ವೈಜ್ಞಾನಿಕ ವಾಗಿ ಮತ್ತು ಲಾಭದಾಯಕ ವಾಗಿ ಕೃಷಿ ಮಾಡುವು ದನ್ನು ತಿಳಿಯುವರು | ದಿನ 23<br>3.1:ಕ್ಷೇತ್ರ ಭೇಟಿ - ಪ್ರಗತಿಪರ ರೈತರ ಹೊಲ/ ತೋಟ ಭೇಟಿ<br>3.2:ವೈಜ್ಞಾನಿಕ ಕೃಷಿಗೆ ಸಂಬಂಧಿಸಿದ ಪಿಪಿಟಿಗಳು<br>3.3:ವಿಡಿಯೋಗಳ ವೀಕ್ಷಣೆ<br>3.4:ಸ್ಥಳೀಯ ಮಣ್ಣು ಪರೀಕ್ಷಾ ಕೇಂದ್ರಗಳ ಭೇಟಿ | 3.1-ಸ್ಥಳೀಯ ಪ್ರಗತಿಪರ ರೈತರ ಭೇಟಿ.<br>ಮಣ್ಣು ಪರೀಕ್ಷಾ ಕೇಂದ್ರಗಳ ಭೇಟಿ ಮತ್ತು ಮಾಹಿತಿ ಸಂಗ್ರಹಣೆ.<br>ಪಶುಸಂಗೋಪನಾ ಕೇಂದ್ರ/ತಳಿಸುಧಾರಣಾ ಕೇಂದ್ರಗಳ ಭೇಟಿ ಮಾಡಿಸಿ ಕೃಷಿ ನಿರ್ವಹಣೆಯ ಕುರಿತು ಸರಳ ಚರ್ಚೆ ಮಾಡಿಸೋಣ.<br>https://www.youtube.com/watch?v=aHN6SRwwdek |

| | | | |
|---|---|---|---|
| | | 3.5:ಸ್ಥಳೀಯ ತಳಿ ಸುಧಾರಣಾ ಕೇಂದ್ರಗಳ ಭೇಟಿ. | |
| 10.ಜೀವ ಕೋಶದ ಅರ್ಥ,ಕಣ ದಂಗಗಳು ಅಂಗಾಂಶಗಳ ರಚನೆ &ಕಾರ್ಯ ವನ್ನು ವಿವರಿಸು ವರು | 1.ಜೀವಕೋಶ ದ ಅರ್ಥ, ಕಣದಂಗಗಳ ರಚನೆ ಮತ್ತು ಕಾರ್ಯವನ್ನು ತಿಳಿಯುವರು | ದಿನ 24:<br>1.1:ಸೂಕ್ಷ್ಮದರ್ಶಕ ಯಂತ್ರದ ಸಹಾಯದಿಂದ ಜೀವಕೋಶ ಮತ್ತು ಕಣದಂಗಗಳ ವೀಕ್ಷಣೆ.<br>1.2:ಜೀವಕೋಶದ ಚಿತ್ರಪಟ ನೋಡಿ ಭಾಗಗಳನ್ನು ಹೆಸರಿಸು.<br>1.3:ಕೊಟ್ಟಿರುವ ಕಣದಂಗಂಗಳ ಚಿತ್ರಗಳನ್ನು ಖಾಲಿ ಜೀವಕೋಶದ ಚಿತ್ರಪಟದಲ್ಲಿ ಜೋಡಿಸು.<br>1.4:ಜೀವಕೋಶದ ಚಿತ್ರರಚನೆ | 1.1-ವಿದ್ಯಾರ್ಥಿಗಳು ಶಿಕ್ಷಕರ ಮಾರ್ಗದರ್ಶನದಲ್ಲಿ ಈರುಳ್ಳಿ ಪೊರೆಯ ಬಳಕೆಯಿಂದ ತಾತ್ಕಾಲಿಕ ಸ್ಲೈಡ್ ತಯಾರಿಸಲು ಸಹಕರಿಸೋಣ, ಸೂಕ್ಷ್ಮದರ್ಶಕ ಯಂತ್ರದ ಸಹಾಯದಿಂದ ಸ್ಲೈಡ್ ವೀಕ್ಷಿಸಿ, ಗಮನಿಸಿದ ರಚನೆಯನ್ನು ಬರೆದು ಸಹಪಾಠಿಗಳು ಬರೆದಿರುವ ರಚನೆಯೊಂದಿಗೆ ಹೋಲಿಸಲು ತಿಳಿಸಿ.ಜೀವಕೋಶದ ಕಣದಂಗಗಳ ರಚನೆ ಬರೆಯಲು ಮಾರ್ಗದರ್ಶಿಸೋಣ. |
| | 2.ಸಸ್ಯ ಅಂಗಾಂಶಗಳ ವಿಧಗಳು ಮತ್ತು ಕಾರ್ಯವನ್ನು ವಿವರಿಸುವರು. | ದಿನ 25<br>2.1:ತಾತ್ಕಾಲಿಕ ಸ್ಲೈಡ್ ಗಳ ತಯಾರಿಕೆ & ವೀಕ್ಷಣೆ.<br>2.2:ಸಸ್ಯ ಅಂಗಾಂಶಗಳ ಚಿತ್ರಪಟ ವೀಕ್ಷಣೆ<br>2.3:ಸಸ್ಯ ಅಂಗಾಂಶಗಳ ವಿಡಿಯೋ ವೀಕ್ಷಣೆ | https://www.youtube.com/watch?v=GICOQijkIKc<br>2.1-ವಿದ್ಯಾರ್ಥಿಗಳು ಶಿಕ್ಷಕರೊಂದಿಗೆ ಕರ್ಣಕುಂಡಲ, ಅಡ್ಡಿಕೆ(ಟ್ರೈಡಾಕ್ಸ್) ಕೆಂಪುದಂಟಿನ ಕಾಂಡವನ್ನು ಬಳಸಿ ಕಾಂಡದ ಅಡ್ಡ ಸೀಳಿಕೆಯ ತಾತ್ಕಾಲಿಕ ಸ್ಲೈಡ್ ತಯಾರಿಸಿ ಸೂಕ್ಷ್ಮದರ್ಶಕದಲ್ಲಿ ವೀಕ್ಷಿಸಲಿ.ಅಂಗಾಂಶಗಳ ರಚನೆಯನ್ನು ಗುರುತಿಸಿ ಚಿತ್ರರೂಪದಲ್ಲಿ ವ್ಯಕ್ತಪಡಿಸಲು ಹೇಳೋಣ. |
| | 3.ಪ್ರಾಣಿ ಅಂಗಾಂಶಗಳ ವಿಧಗಳು ಮತ್ತು ಕಾರ್ಯಗ | 3.1:ಪ್ರಾಣಿ ಅಂಗಾಂಶಗಳ ಚಿತ್ರಪಟಗಳ ವೀಕ್ಷಿಸು ರಚನೆ ವಿವರಿಸು<br>3.2:ವಿಡಿಯೋ ವೀಕ್ಷಣೆ<br>3.3:ಪ್ರಾಣಿ ಅಂಗಾಂಶಗಳ ಆಲ್ಬಂ ತಯಾರಿಕೆ | 3.1-ವಿದ್ಯಾರ್ಥಿಗಳು ವಿವಿಧ ಗುಂಪುಗಳಲ್ಲಿ ಪ್ರಾಣಿ ಅಂಗಾಂಶಗಳ ಚಿತ್ರಪಟಗಳನ್ನು ವೀಕ್ಷಿಸಿ, ಅವುಗಳ ರಚನೆಯನ್ನು ತಾವು ಕಂಡಂತೆ ಹೇಳಲು ಸೂಚಿಸೋಣ. |

| | | | |
|---|---|---|---|
| | ಳನ್ನು ವಿವರಿಸುವರು. | | |
| 11.ಅನುಕೂಲಕಾರಿ & ರೋಗಕಾರಕ ಸೂಕ್ಷ್ಮಾಣುಜೀವಿಗಳ ಬಗ್ಗೆ ತಿಳಿದು ಆರೋಗ್ಯದ ಮಹತ್ವ ವಿವರಿಸುವರು. | 1.ಸೂಕ್ಷ್ಮಾಣುಜೀವಿಗಳ ಉಪಯೋಗಗಳು & ಸೂಕ್ಷ್ಮಾಣುಜೀವಿಗಳಿಂದ ಉಂಟಾಗುವ ರೋಗಗಳ ಬಗ್ಗೆ ಜಾಗೃತರಾಗುವರು. | ದಿನ 26<br>1.1:ಸೂಕ್ಷ್ಮಾಣುಜೀವಿಗಳ ಉಪಯೊಗಗಳನ್ನು ಕುರಿತ ಚಿತ್ರಪಟ ವೀಕ್ಷಿಸಿ ವಿವರಿಸು<br>1.2:ಸೂಕ್ಷ್ಮಾಣುಜೀವಿಗಳ ಉಪಯೊಗಗಳನ್ನು ಕುರಿತ ಕೋಷ್ಠಕ ರಚನೆ<br>1.3:ಬ್ರೆಡ್ ತಯಾರಿಕೆ,ಮದ್ಯ ತಯಾರಿಕೆ & ಔಷಧಗಳ ತಯಾರಿಕೆಯ ವಿಡಿಯೋಗಳ ವೀಕ್ಷಣೆ. | 1.1- ಸೂಕ್ಷ್ಮಾಣುಜೀವಿಗಳ ಉಪಯೊಗಗಳನ್ನು ಕುರಿತ ಚಿತ್ರಪಟ ವೀಕ್ಷಿಸಿ ಅದರ ಮಹತ್ವ ತಿಳಿಯಲು ಮಾರ್ಗದರ್ಶಿಸಿ, ಅದರ ಮಹತ್ವವನ್ನು ತರಗತಿಯಲ್ಲಿ ಚರ್ಚಿಸೋಣ. |
| | 2.ಸಾಂಕ್ರಾಮಿಕ ರೋಗಗಳು ಹರಡುವ ಬಗೆ & ತಡೆಗಟ್ಟುವ ಕ್ರಮಗಳನ್ನು ತಿಳಿಯುವರು. | ದಿನ 27<br>2.1:ಸಾಂಕ್ರಾಮಿಕ ರೋಗಗಳು ಹರಡುವ ಬಗೆ & ತಡೆಗಟ್ಟುವ ಕ್ರಮಗಳ ಕುರಿತು ಚರ್ಚೆ<br>2.2:ಸಾಂಕ್ರಾಮಿಕ ರೋಗಗಳು ಹರಡುವ ಬಗೆ & ತಡೆಗಟ್ಟುವ ಕ್ರಮಗಳ ಕುರಿತು ವಿಡಿಯೋಗಳ ವೀಕ್ಷಣೆ<br>2.3:ಸಾಂಕ್ರಾಮಿಕ ರೋಗಗಳು ಹರಡುವ ಬಗೆ & ತಡೆಗಟ್ಟುವ ಕ್ರಮಗಳ ಕುರಿತು ಕೋಷ್ಟಕ ತಯಾರಿಕೆ. | 2.1-ಸಾಂಕ್ರಾಮಿಕ ರೋಗಗಳು ಹರಡುವ ಬಗೆ & ತಡೆಗಟ್ಟುವ ಕ್ರಮಗಳ ಕುರಿತು ಪಿ ಪಿ ಟಿ ಮತ್ತು ವೀಡಿಯೋಗಳನ್ನು ತರಗತಿಯಲ್ಲಿ ವೀಕ್ಷಿಸಲು ಅವಕಾಶಿಸೋಣ. ನಿತ್ಯಜೀವನದಲ್ಲಿ ಅವುಗಳ ಅನಾನುಕೂಲತೆಗಳ ಬಗ್ಗೆ ಗುಂಪುಗಳಲ್ಲಿ ಚರ್ಚಿಸಿ ಮಂಡಿಸಲು ಮಾರ್ಗದರ್ಶಿಸೋಣ.<br>https://www.youtube.com/watch?v=KDkeC4eOp3c |

| | | | |
|---|---|---|---|
| | 3.ಆರೋಗ್ಯದ ಮಹತ್ವವನ್ನು ಚರ್ಚಿಸುವರು. | ದಿನ 28<br>3.1:ಆರೋಗ್ಯದ ಗುಟ್ಟು ತಿಳಿದು ಜಾಗೃತನಾಗು"(ಆರೋಗ್ಯ ಸಂಬಂಧಿ ಬಿತ್ತಿಪತ್ರಗಳ ಪ್ರದರ್ಶನ) ಚಟುವಟಿಕೆ<br>3.2:ಮಾಹಿತಿ ಸಂಗ್ರಹಣೆ & ಚರ್ಚೆ<br>3.3:ಆರೋಗ್ಯ ಸಂಬಂಧಿ ಘೋಷವಾಕ್ಯ ಸಂಗ್ರಹಿಸು ಅಥವಾ ರಚಿಸು.<br>3.4:ದಿನಪತ್ರಿಕೆ ನಿಯತಕಾಲಿಕೆಗಳಿಂದ ಆರೋಗ್ಯದ ಮಹತ್ವ ಕುರಿತ ಲೇಖನಗಳನ್ನು ಸಂಗ್ರಹಿಸಿ ಆಲ್ಬಂ ತಯಾರಿಕೆ. | 3.1-ಪ್ರತಿಜೈವಿಕಗಳು/ಲಸಿಕೆಗಳ ಬಗ್ಗೆ ವಿವರಣೆ ನೀಡಿ, ಮಾಹಿತಿಯನ್ನು ಸಂಗ್ರಹಿಸಿ ರೋಗಗಳು ಹರಡುವ ವಿಧಾನ & ತಡೆಗಟ್ಟುವ ಕ್ರಮಗಳ ಬಗ್ಗೆ ಸರಳ ಟಿಪ್ಪಣಿ ರಚಿಸಲು ಸಹಕರಿಸೋಣ.<br>ಉದಾ: ಬಿ.ಸಿ.ಜಿ , ಪೋಲಿಯೋ, ಡಿಪಿಟಿ , ಕೋವಿಶೀಲ್ಡ್<br>3.4-ಸಾಂಕ್ರಾಮಿಕ ರೋಗಗಳು ಹರಡುವ ಬಗೆ ಮತ್ತು ಅವುಗಳನ್ನು ತಡೆಗಟ್ಟುವ ಕ್ರಮಗಳ ಬಗ್ಗೆ ಗುಂಪುಗಳಲ್ಲಿ ಚರ್ಚೆ ಮಾಡಲು ಹೇಳಿ.ಸಾಂಕ್ರಾಮಿಕ ರೋಗಗಳ ಬಗ್ಗೆ ದಿನಪತ್ರಿಕೆ ತುಣುಕುಗಳು,ವಿಜ್ಞಾನ ನಿಯತಕಾಲಿಕೆಗಳು &ಅಂತರ್ಜಾಲದ ಬಳಕೆಯಿಂದ ಮಾಹಿತಿ ಸಂಗ್ರಹಿಸಿ ವಿವಿಧ ಗುಂಪುಗಳಲ್ಲಿ ಚರ್ಚಿಸಲು ಅವಕಾಶ ಕಲ್ಪಿಸೋಣ. |
| 12.ಮಾನವನಲ್ಲಿ ಉಸಿರಾಟಕ್ರಿಯೆ & ರಕ್ತಪರಿಚಲನೆ ಕ್ರಿಯೆಗಳನ್ನು ವಿವರಿಸುವರು. | 1. ಮಾನವನಲ್ಲಿ ನಡೆಯುವ ಉಸಿರಾಟ ಕ್ರಿಯೆಯನ್ನು ವಿವರಿಸುವರು. | ದಿನ 29<br>1.1:ಮಾನವನಲ್ಲಿ ನಡೆಯುವ ಉಸಿರಾಟ ಕ್ರಿಯೆಯ ಮಾದರಿ ತಯಾರಿಸಿ ವಿವರಿಸುವುದು.<br>1.2:ಮಾನವನಲ್ಲಿ ನಡೆಯುವ ಉಸಿರಾಟ ಕ್ರಿಯೆಯ ಚಿತ್ರಪಟ ವೀಕ್ಷಿಸಿ ವಿವರಿಸು.<br>1.3:ಮಾನವನಲ್ಲಿ ನಡೆಯುವ ಉಸಿರಾಟ ಕ್ರಿಯೆಯ ವಿಡಿಯೋ ವೀಕ್ಷಿಸಿ ವಿವರಿಸು<br>1.4:ಮಾನವನಲ್ಲಿ ನಡೆಯುವ ಉಸಿರಾಟ ಕ್ರಿಯೆಯ ಚಿತ್ರಬರೆದು ವಿವರಿಸು. | 1.1-ಎರಡು ಬಲೂನು, ಎರಡು ಪೈಪ್ , ರಟ್ಟುಗಳನ್ನು ನೀಡಿ ಮಾದರಿ ತಯಾರಿಸಲು ಮಾರ್ಗದರ್ಶಿಸಿ , ಮಾನವನಲ್ಲಿ ನಡೆಯುವ ಉಸಿರಾಟ ಕ್ರಿಯೆಯನ್ನು ತಿಳಿಯಲು ಸಹಕರಿಸೋಣ.<br><br>https://youtu.be/8J5MvwdDnl0 |

| | | | |
|---|---|---|---|
| | 2.ಮಾನವ ನಲ್ಲಿ ನಡೆಯುವ ರಕ್ತಪರಿ ಚಲನಾ ಕ್ರಿಯೆಯನ್ನು ವಿವರಿಸುವರು. | ದಿನ 30<br>2.1:ಮಾನವನಲ್ಲಿ ನಡೆಯುವ ರಕ್ತಪರಿಚಲನಾ ಕ್ರಿಯೆಯ ಚಿತ್ರಪಟ ವೀಕ್ಷಿಸಿ ವಿವರಿಸು.<br>2.2:ಮಾನವನಲ್ಲಿ ನಡೆಯುವ ರಕ್ತಪರಿಚಲನಾ ಕ್ರಿಯೆಯ ವಿಡಿಯೋ ವೀಕ್ಷಿಸಿ ವಿವರಿಸು.<br>2.3:ಮಾನವನಲ್ಲಿ ನಡೆಯುವ ರಕ್ತಪರಿಚಲನಾ ಕ್ರಿಯೆಯ ಚಿತ್ರಬರೆದು ವಿವರಿಸು. | 2.1-ಮಾನವನಲ್ಲಿ ನಡೆಯುವ ರಕ್ತಪರಿಚಲನಾ ಕ್ರಿಯೆಯ ಚಿತ್ರಪಟ ವೀಕ್ಷಿಸಿ ವಿವರಿಸಲು ಸಹಕರಿಸೋಣ.<br><br>https://youtu.be/62znbwWPlrA<br>https://youtu.be/vlLE_1TYlVU |